Request of Cobblers of Gadag to Confer Rights over sheds

617. Sri J. L. KABADE (Ballolli).—

Will the Minister for Municipal Administration be pleased to state.—

(*a*) whether the Cobblers of Gadag town had applied to the Government under the Government Order of proprietary right in the year 1959-60 for conferring of right over the sites whereon they have constructed sheds and dwelling for decades together;

(*b*) the number of Cobblers applied for such rights;

(*c*) the action Government has taken to give them sites by acquiring from the private owners ?

Sri B. BASAVALINGAPPA (Minister for Municipal Abministration).—

(*a*) Yes.

(*b*) 18.

(*c*) Government have issued directions to the Divisional Commissioner for taking immediate action to acquire the land and allot the sites to the occupants.

ಶ್ರೀ ಜೆ. ಎಲ್. ಕಬಾಡಿ.—ನರ್ಕಾರೀ ಜಮೀನನ್ನು ಈ ಚರ್ಮ್ಮಾರ ಜನರು 13 ವರ್ಷಗಳಿಂದಲೂ ಕೇಳಿಕೊಂಡು ಬಂದಿದ್ದಾರೆ. ಆದರೆ ಈಗ ಅದರ ಬೆಲೆ ಜಾಸ್ತಿಯಾಗಿರುವುದರಿಂದ ಅದರ ಹಣವನ್ನು ಪೂರೈಸುವುದಕ್ಕಾಗುವುದಿಲ್ಲವೆಂದು ಲೀಗಲ್ ಡಿಪಾರ್ಟ್‌ಮೆಂಟಿನಿಂದ ಏನಾದರೂ ತಕರಾರು ಬಂದಿದೆಯೇ ಹೇಗೆ ?

† ಶ್ರೀ ಬಿ. ಬಸವಲಿಂಗಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ. ಜಮೀನನ್ನು ಅಕ್ವಯರ್ ಮಾಡಬೇಕೆಂದು ಹುಕುಂ ಮಾಡಿದ್ದೇವೆ; ಮತ್ತು ಅದನ್ನು ಅಕ್ವಯರ್ ಮಾಡುತ್ತಾರೆ.

ಶ್ರೀ ಜೆ. ಎಲ್. ಕಬಾಡಿ.—ಜಮೀನು ವಾಲೀಕರು ಪ್ರಭಾವಶಾಲಿಯಾಗಿರುವುದರಿಂದ ಅಧಿಕಾರಿಗಳಿಂದ ತಮಗೆ ಅನುಕೂಲವಾಗುವಂತೆ ರಿಪೋರ್ಟ್ ಮಾಡಿಸಿ ಹರಿಜನರಿಗೆ ಅವು ಸಿಗದೇ ಇರುವ ರೀತಿಯಲ್ಲಿ ಪ್ರಯತ್ನ ಮಾಡುತ್ತಾ ಇರುವುದು ನರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ ಬಸವಲಿಂಗಪ್ಪ.—ಅಧಿಕಾರಿಗಳು ಯಾವುದಕ್ಕೆ ಪ್ರಯತ್ನ ಮಾಡಿದರೂ ನರ್ಕಾರದವರು ಅದನ್ನು ಅಕ್ಪೈರ್ ಮಾಡಿಕೊಂಡು ಒಂದು ನಿರ್ಧಾರಕ್ಕೆ ಬರುವಾಗ ಅವೆಲ್ಲವೂ ಮಾಯವಾಗುತ್ತವೆ.

ಶ್ರೀ ಜೆ. ಎಲ್. ಕಬಾಡಿ.—ಕಳೆದ 13 ವರ್ಷಗಳಿಂದ ನಾವು ಇದರ ಬಗ್ಗೆ ಪದೇ ಪದೇ ವಿನಂತಿ ಮಾಡಿಕೊಂಡು ಈ ನಿವೇಶನಗಳನ್ನು ಹರಿಜನರಿಗೇ ಕೊಡಬೇಕೆಂದು ಹೇಳಿದ್ದೇವೆ. ಚರ್ಮಾದ ಕೈಗಾರಿಕೆಯ ಅಭಿವೃದ್ಧಿಗೋಸ್ಕರ ನಾವು ಪತ್ರ ಮುಖೇನ ವಿನಂತಿ ಮಾಡಿಕೊಂಡು ಬಂದಿದ್ದೇವೆ. ಆದರೆ ಜಿಲ್ಲಾಧಿಕಾರಿಗಳು ಮತ್ತು ಸ್ಥಳೀಯ ಅಧಿಕಾರಿಗಳು ಖಾಸಗೀ ವಾಲೀಕರ ಜೊತೆಯಲ್ಲಿ ಕೂಡಿಕೊಂಡು ಕಾನೂನು ರೀತಿ ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ನರ್ವ ಪ್ರಯತ್ನ ಮಾಡುತ್ತಿದ್ದಾರೆ. ಮೇಲಿಂದಮೇರೆ ನರ್ಕಾರದ ಗಮನಕ್ಕೆ ಇದನ್ನು ತರುತ್ತಿದ್ದೇವೆ. ನರ್ಕಾರದವರು ಹಿಂದೆ ಅರಿಗೆ ಇದನ್ನು ಕೊಡುತ್ತೇವೆ, ಹಿಂದಕ್ಕೆ ಹೋಗುವುದಿಲ್ಲವೆಂದು ಈ ಸದನದಲ್ಲಿ ಆಶ್ವಾಸನೆ ಕಳೆದ 6 ವರ್ಷಗಳ ಹಿಂದೆಯೇ ಹಿಂದಿನ ನರ್ಕಾರ ಕೊಟ್ಟಿದ್ದು ಇದೆ. ಆದ್ದರಿಂದ ಈಗಲಾದರೂ ತೀವ್ರಗತಿಯಲ್ಲಿ ಅವನ್ನು ಅಕ್ಪೈರ್ ಮಾಡಿಕೊಂಡು ಹರಿಜನರಿಗೆ ಕೊಡುವ ವರ್ಕಾಡು ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಅಕ್ಸೆಪ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಡೆಪ್ಯುಟಿ ಮಿನಿಸ್ಟರ್ ಆಗಿದ್ದಾಗ ಇದನ್ನು ಅಕ್ಸೆಪ್ಟ್ ಮಾಡಬೇಕೆಂದು ಆದೇಶ ಕೊಟ್ಟಿದ್ದೆ. ಆ ಕಾಲಕ್ಕೆ ಅದು ಆಗಲಿಲ್ಲ. ನಾನು ಹೋದಮೇಲೆ ನಮ್ಮದು (ಒ) ಕಾಂಗ್ರೆಸ್ ಸರ್ಕಾರ ಬಂದ ಮೇಲೆ ನೀವು ಇದರ ಬಗ್ಗೆ ಒತ್ತಾಯ ಮಾಡಿರಬೇಕು. ಆ ಸರ್ಕಾರವೂ ಕೂಡ ಅದನ್ನು ಮಾಡಲಿಲ್ಲ. ಈ ಸರ್ಕಾರ ಬಂದಮೇಲೆ ಇದನ್ನು ಮಾಡಬೇಕೆಂದು ಚೆಮ್ಮಾರರು ಬೆನ್ನು ಹತ್ತಿದ್ದಾರೆ. ಅದನ್ನು ಮಾಡಿಕೊಡುತ್ತೇವೆ.

ಶ್ರಿ ಜೆ. ಎಲ್. ಕಬಾಡಿ.—ಈಗಾಗಲೇ ಹರಿಜನರಿಗೆ ಜಾಗ ಕೊಡದೇ ಇರುವುದರಿಂದ ಕೆಲವು ಮಾಲೀಕರುಗಳು ಕೆಲವು ಹರಿಜನರನ್ನು ತಮ್ಮ ಕೈಕೆಳಗೆ ತೆಗೆದುಕೊಂಡು ಅವರಿಗೆ ಕೆಲವು ಜಾಗಗಳನ್ನು ಹೆಚ್ಚಿನ ಬೆಲೆಗೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಇದು ಸರ್ಕಾರದ ಗಮನಕ್ಕೆ ಬಂದಿಲ್ಲ. ಯಾರ್ಯಾರು ಖರೀದಿ ಮಾಡಿಕೊಂಡಿದ್ದಾರೋ ಅದು ನಮ್ಮ ಗಮನಕ್ಕೆ ಬರುವುದಿಲ್ಲ. ಅಕ್ಸಿಸಿಷನ್ ಆಕ್ಟಿನ 4ನೇ ಕಲಂ ಪ್ರಕಾರ ಹೇಳಿರುವ ಹಾಗೆ ನಂತರ ಪರಭಾರೆ ಮಾಡಿದ್ದರೂ ಕೂಡ ಅದು ಅಫ್ಸಾಗಿ ಕಾನೂನು ಪ್ರಕಾರ ಸಿದ್ಧಿಯಾಗುವುದಿಲ್ಲ.

Allotment of Scooters

815. Sri K. MADE GOWDA (Bannur).—

Will the Minister for Labour be pleased to state:—

(*a*) the number of applications received for allotment of scooters from January 1972 to this date ;

(*b*) the persons to whom the scooters were allotted ;

(*c*) the basis on which the allotment was made ?

Sri AZEEZ SAIT (Minister for Labour).—

(*a*) 2,223 applications were received from January 1972 to end of February, 1973.

(*b*) The list placed on the Table of the House. *

(*c*) Need, urgency and priority of the applicants.

ಶ್ರೀ ಕೆ. ಮಾದೇಗೌಡ.—ಈ ಸ್ಕೂಟರ್‌ಗಳನ್ನು ಪ್ರೈಯಾರಿಟಿಯ ಮೇಲೆ ಕೊಡುತ್ತೇವೆ ಎಂಬುದಾಗಿ ಹೇಳಿದ್ದೀರಿ. ಹೀಗೆ ಪ್ರೈಯಾರಿಟಿಯ ಮೇಲೆ ಕೊಡುವ ಕಾಲದಲ್ಲಿ ಸರ್ಕಾರದಿಂದ ಪ್ರೈಯಾರಿಟಿಯ ಮೇಲೆ ತೆಗೆದುಕೊಂಡಿರುವವರು ಯಾವ ಪ್ರಾತ್ರಿಗೆ ಒಳಪಡಬೇಕೆಂದು ಸರ್ಕಾರ ಪವರು ಏನಾದರೂ ನಿಯಮವನ್ನು ಹಾಕಿದ್ದಾರೆಯೇ ?

† ಶ್ರೀ ಅಜೀಜ್ ಸೇಟ್.—ಅದನ್ನು ಎರಡು ವರ್ಷಗಳವರೆಗೆ ವಾರಾಳು ಮಾಡಕೂಡದೆಂದು ಹೇಳಿದ್ದೇವೆ.

ಶ್ರೀ ಕೆ. ಮಾದೇಗೌಡ.—ಸ್ಕೂಟರ್ ತೆಗೆದುಕೊಂಡ ವ್ಯಕ್ತಿಗಳು ಬಿಟ್ಟು ಯಾರು ಬೇಕಾದರೂ ಅದನ್ನು ಉಪಯೋಗಿಸಬಹುದೇ ಅಥವಾ ತೆಗೆದುಕೊಂಡ ವ್ಯಕ್ತಿಗಳೇ ಅದರ ಉಪಯೋಗವನ್ನು ಪಡೆಯತಕ್ಕ ಪ್ರಾತ್ರಾ ಸರ್ಕಾರದಲ್ಲಿದೆಯೇ ?

---

* Copy placed in the Mysore Legislature Library *Vide* No 38, dated 12th May 1973.